ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22 221321 / 25
Website : www.ksrtc.in

ಸಂ.ಕರಾಸಾ:ಕೇಕ:ಸಂ:ವಾಣಿಜ್ಯ/919/ 108 / 2018-19 ದಿನಾಂಕ: 07-04-2018

## ಸುತ್ತೋಲೆ ಸಂಖ್ಯೆ: 1428 /2018

(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)

**ವಿಷಯ:** ಕ.ರಾ.ರ.ಸಾ ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಕೆ.ಎಂ.ಎಫ್ ಮತ್ತು ಅದರ ಅಧೀನದಲ್ಲಿ ಬರುವ ಹಾಲು ಒಕ್ಕೂಟಗಳಿಗೆ ನಂದಿನಿ ಹಾಲಿನ ಮಳಿಗೆಗಳನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017, ದಿ: 26-07-2017,
2. ನಿರ್ದೇಶಕ ಮಂಡಳಿಯ ಠರಾವು ಸಂಖ್ಯೆ: 10021 / 437ನೇ ಸಭೆ ದಿ: 02-03-2018.

-*-

ಕ.ರಾ.ರ.ಸಾ ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಸೌಲಭ್ಯ ಒದಗಿಸುವ ಹಾಗೂ ಕರ್ನಾಟಕ ರಾಜ್ಯದ ರೈತರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ನೋಂದಾಯಿತವಾಗಿರುವ ಕೆ.ಎಂ.ಎಫ್ ಮತ್ತು ಅದರ ಅಧೀನದಲ್ಲಿ ಬರುವ ಹಾಲು ಒಕ್ಕೂಟಗಳಿಗೆ ನೇರವಾಗಿ ಮಳಿಗೆಗಳನ್ನು ಹಂಚಿಕೆ ಮಾಡುವ ಸಂಬಂಧ ದಿನಾಂಕ 02-03-2018 ರಂದು ನಡೆದ 437ನೇ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಚರ್ಚಿಸಿ, ಸರ್ಕಾರಿ ಮತ್ತು ಅರೆ-ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಮನವಿಗಳ ಆಧಾರದ ಮೇಲೆ ಮಳಿಗೆಗಳನ್ನು ನೇರವಾಗಿ ಮಂಜೂರು ಮಾಡುವ ರೀತಿಯಲ್ಲಿಯೇ, ರಾಜ್ಯದ ಸಹಕಾರ ಇಲಾಖೆಯ ವ್ಯಾಪ್ತಿಯ ಕೆ.ಎಂ.ಎಫ್ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಬಮೂಲ್, ಮನ್‌ಮುಲ್, ಕೋಮುಲ್ ಮತ್ತು ಇತರೆ ಹಾಲು ಒಕ್ಕೂಟ ಸಂಸ್ಥೆಗಳಿಗೂ ಸಹ ಟೆಂಡರ್ ಇಲ್ಲದೇ ನೇರವಾಗಿ ಮಳಿಗೆಗಳನ್ನು ಹಂಚಿಕೆ ಮಾಡಲು ತೀರ್ಮಾನ ಕೈಗೊಂಡಿರುತ್ತದೆ.

ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017 ರ ಕ್ರಮ ಸಂಖ್ಯೆ: XXIII ರನ್ವಯ ಸರ್ಕಾರಿ / ಅರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಪರವಾನಗಿ ನೀಡುವಾಗ ಅನುಸರಿಸುವ ನಿಯಮ : ನಿಬಂಧನೆಗಳನ್ನು ಅನುಸರಿಸಿ, ಕೆ.ಎಂ.ಎಫ್ ಮತ್ತು ಅದರ ಅಧೀನದಲ್ಲಿ ಬರುವ ಹಾಲು ಒಕ್ಕೂಟಗಳಿಗೆ, ವಾಣಿಜ್ಯ ಮಳಿಗೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವುದು.

........2

ಮುಂದುವರೆದು, ಕೆ.ಎಂ.ಎಫ್ ಮತ್ತು ಅದರ ಅಧೀನದಲ್ಲಿ ಬರುವ ಹಾಲು ಒಕ್ಕೂಟಗಳಿಗೆ ವಾಣಿಜ್ಯ ಮಳಿಗೆಗಳನ್ನು ಮಂಜೂರು ಮಾಡಲು ಸಾ.ಸ್ಥಾ.ಆ ಸಂಖ್ಯೆ: 787/2017 ರ ಕ್ರಮ ಸಂಖ್ಯೆ: **XXIII – 4** ರನ್ವಯ ಸಂಬಂಧಿತ ಹಾಲು ಒಕ್ಕೂಟಗಳು "ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ" ನೋಂದಾಯಿತವಾಗಿರುವ ಬಗ್ಗೆ ಸ್ವಯಂ–ದೃಢೀಕರಣ ಪಡೆಯಬೇಕು.

ವಾಣಿಜ್ಯ ಮಳಿಗೆಗಳಿಗೆ ಅನ್ವಯಿಸುವ ಇತರೆ ನಿಯಮ : ನಿಬಂಧನೆಗಳು ಈ ಮಳಿಗೆಗಳಿಗೂ ಅನ್ವಯವಾಗುತ್ತವೆ.

ಸುತ್ತೋಲೆಯಲ್ಲಿನ ನಿರ್ದೇಶನಗಳು ಈ ಕೂಡಲೇ ಜಾರಿಗೆ ಬರುತ್ತವೆ. ಉಳಿದಂತೆ ಉಲ್ಲೇಖಿತ ಸಾಮಾನ್ಯ ಸ್ಥಾಯಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ ನಿಗಮ

ಪ್ರತಿಯನ್ನು :

1) ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ. ನಿಗಮ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಮಸಾಸಂಸ್ಥೆ, ಬೆಂಗಳೂರು / ವಾಕರಸಾಸಂಸ್ಥೆ, ಹುಬ್ಬಳ್ಳಿ / ಈಕರಸಾ ಸಂಸ್ಥೆ ಗುಲ್ಬರ್ಗಾ, ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3) ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಅಧ್ಯಕ್ಷರು / ಉಪಾಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ & ಜಾ) / ನಿರ್ದೇಶಕರು (ಸಿ & ಪ) ರವರ ಹಿರಿಯ / ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.